# ಕರ್ನಾಟಕ ಸರ್ಕಾರ

ಸಂ:ಒಇ 25 ಪಸ್ಯಸೇ 2006

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ:16-12-2006

## ಸುತ್ತೋಲೆ

ವಿಷಯ: ಯುದ್ಧ:ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮೃತಪಟ್ಟ ಯೋಧರಿಗೆ ಅಂತಿಮ ನಮನ ಹಾಗೂ ಕುಟುಂಬಕ್ಕೆ ಸಾಂತ್ವನ ನೀಡುವ ಕುರಿತು ಸೂಚನೆಗಳು.

-------

ನಮ್ಮ ರಾಜ್ಯಕ್ಕೆ ಸಂಬಂಧಿಸಿದಂತೆ ಯುದ್ಧದಲ್ಲಿ ಅಥವಾ ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮೃತಪಟ್ಟ ಯೋಧರ ಪಾರ್ಥಿವ ಶರೀರವನ್ನು ಸಕಲ ಗೌರವಗಳೊಂದಿಗೆ ಅವರ ಉತ್ತರಾಧಿಕಾರಿಗಳಿಗೆ ತಲುಪಿಸುವ ಕ್ರಮಕ್ಕಾಗಿ ಈ ಸುತ್ತೋಲೆಯನ್ನು ಹೊರಡಿಸಲಾಗಿದೆ.

ಯುದ್ಧದಲ್ಲಿ ಅಥವಾ ಯುದ್ಧದಂತಹ ಕಾರ್ಯಾಚರಣೆಯಲ್ಲಿ ಯೋಧರು ಮರಣಹೊಂದಿದಾಗ ಅವರ ಪಾರ್ಥಿವ ಶರೀರವನ್ನು ಹತ್ತಿರದ ವಿಮಾನ ನಿಲ್ದಾಣಕ್ಕೆ ತಂದು ನಂತರ ರಸ್ತೆಯ ಮುಖಾಂತರ ಅವರ ವಾಸ ಸ್ಥಳಕ್ಕೆ ರವಾನಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಯೋಧರನ್ನು ಸಾಮಾನ್ಯವಾಗಿ ಎರಡು ವರ್ಗಗಳನ್ನಾಗಿ ವಿಂಗಡಿಸಲಾಗಿದೆ.

(1) ಸಶಸ್ತ್ರ ಪಡೆಗಳ ಸೈನಿಕರು (ಭಾರತೀಯ ಭೂ ಸೇನೆ, ನೌಕದಳ ಹಾಗೂ ವಾಯುಸೇನೆಯ ಸದಸ್ಯರು)

(2) ಅರೆ ಮಿಲಿಟರಿ ಪಡೆಯ ಯೋಧರು (ಬಿಎಸ್‌ಎಫ್) ಹಾಗೆಯೇ ಸೈನ್ಯ ಸೇವೆಯ ಮರಣವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ.

ಅ) ಯುದ್ಧ ಅಥವಾ ಯುದ್ಧದಂತಹ ಕಾರ್ಯಾಚರಣೆಯಲ್ಲಿ ಸಂಭವಿಸುವ ಮರಣ (Battle Casualty)

ಆ) ಕಾಯಿಲೆ, ಅಪಘಾತ ಮುಂತಾದ ಕಾರಣಗಳಿಂದ ಸಂಭವಿಸುವ ಮರಣ (Physical Casualty)

2. <u>ಯುದ್ಧ:ಯುದ್ಧದಂತಹ ಕಾರ್ಯಾಚರಣೆಯಲ್ಲಿ ಹಾಗೂ ಇತರೇ ರೀತಿ ಮೃತಪಟ್ಟ ಸಶಸ್ತ್ರ ಪಡೆ ಯೋಧರಿಗೆ ಅಂತಿಮ ನಮನ ಸಲ್ಲಿಸುವ ಬಗ್ಗೆ ಕಾರ್ಯಸೂಚಿ</u>

ಯುದ್ಧ ಅಥವಾ ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮರಣಹೊಂದಿದ ಬಗ್ಗೆ ಮಾಹಿತಿಯನ್ನು ಸಂಬಂಧಿಸಿದ ಸೇನಾ ಪಡೆಯ ಘಟಕದ ಪ್ರಾಧಿಕಾರವು ಕರ್ನಾಟಕದ ಸಬ್

ಪುಟ...2.

ಏರಿಯಾ ಕಛೇರಿಗೆ ಮಾಹಿತಿ ನೀಡುತ್ತದೆ. ಸಬ್ ಏರಿಯಾ ಕಛೇರಿಯು ರಾಜ್ಯ ಸರ್ಕಾರದ ಸಿ.ಆ.ಸು. ಇಲಾಖೆಯ ಶಿಷ್ಟಾಚಾರ ವಿಭಾಗಕ್ಕೆ ಹಾಗೂ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಗೆ ಮಾಹಿತಿ ನೀಡುತ್ತದೆ. ಶಿಷ್ಟಾಚಾರ ವಿಭಾಗವು ಜಿಲ್ಲಾಡಳಿತಕ್ಕೆ ಹಾಗೂ ಸಂಬಂಧಿಸಿದ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳಿಗೆ ಸಂದೇಶವನ್ನು ನೀಡಬೇಕು. ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ನಿರ್ದೇಶನಾಲಯವು ತಮ್ಮ ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಕಾರ್ಯಾಲಯಕ್ಕೆ ಮಾಹಿತಿಯನ್ನು ಒದಗಿಸಲು ಕ್ರಮ ಕೈಗೊಳ್ಳುವುದು.

3. <u>ಬೆಂಗಳೂರಿನಲ್ಲಿ ಮೃತ ದೇಹದ ಸ್ವೀಕೃತಿ / ಗೌರವ ಕ್ರಮ</u>

ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಬರುವ ಎಲ್ಲಾ ಮೃತ ಯೋಧರ ದೇಹಕ್ಕೆ ಸಬ್ ಏರಿಯಾ ಕಛೇರಿಯ ಅಧಿಕಾರಿಗಳು, ರಾಜ್ಯ ಶಿಷ್ಟಾಚಾರ ವಿಭಾಗ ಹಾಗೂ ಸೈನಿಕ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪುಷ್ಪಗುಚ್ಛ ಇರಿಸಿ ಅಂತಿಮ ನಮನ ಸಲ್ಲಿಸುವುದು. ಯುದ್ಧದಲ್ಲಿ ಮರಣವನ್ನು ಹೊಂದಿದ ಯೋಧರಿಗೆ ಸಬ್ ಏರಿಯಾ ವತಿಯಿಂದ ಗೌರವ ರಕ್ಷೆ (ಗಾರ್ಡ್ ಆಫ್ ಆನರ್) ಹಾಗೂ ಸಕಲ ಮಿಲಿಟರಿ ಗೌರವದೊಂದಿಗೆ ಸಬ್ ಏರಿಯಾ ಕಛೇರಿಯು ನಿಯೋಜಿಸಿದ ಸೇನಾ ರೆಜಿಮೆಂಟಲ್ ಸೆಂಟರ್ ವತಿಯಿಂದ ನೆರವೇರಿಸಲಾಗುವುದು. ಯುದ್ಧದಲ್ಲಿ ಮರಣ ಹೊಂದಿದ ಯೋಧರ ಪಾರ್ಥಿವ ಶರೀರ ರವಾನಿಸಲು ಭೂಸೇನೆಯು ವಾಹನವನ್ನು ಒದಗಿಸುವುದು. ಸೈನಿಕರು ಇತರ ಕಾರಣಗಳಿಂದ ಮೃತಪಟ್ಟಿದ್ದಲ್ಲಿ ಕೇವಲ ಪುಷ್ಪ ನಮನ ಹಾಗೂ ಗೌರವ ರಕ್ಷೆ ಅರ್ಪಿಸುವುದು.

4. <u>ಸ್ವಗ್ರಾಮದಲ್ಲಿ ಅಂತ್ಯ ಕ್ರಿಯೆ ಕ್ರಮ</u>

ಯುದ್ಧದಲ್ಲಿ ಮರಣ ಹೊಂದಿದ ಯೋಧರ ಅಂತಿಮ ಸಂಸ್ಕಾರಕ್ಕೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮತ್ತು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಂಟಿ/ಉಪ ನಿರ್ದೇಶಕರು ಭಾಗವಹಿಸಬೇಕು. ಹಾಗೂ ಸಂತ್ರಸ್ತ ಕುಟುಂಬ ವರ್ಗಕ್ಕೆ ಸಾಂತ್ವನ ನೀಡಿ ರಾಜ್ಯ ಸರ್ಕಾರವು ನೀಡುವ ಸೌಲಭ್ಯ / ಸವಲತ್ತುಗಳ ಬಗ್ಗೆ ಮಾಹಿತಿ ನೀಡಬೇಕು. ಯಾವ ಜಿಲ್ಲೆಗಳಲ್ಲಿ ಸೇನಾ ದಳದ ನೆಲೆಗಳು ಇಲ್ಲವೋ ಅಂತಹ ಜಿಲ್ಲೆಗಳಲ್ಲಿ ಯೋಧರ ಪಾರ್ಥಿವ ಶರೀರವನ್ನು ಸಕಲ ಸರ್ಕಾರಿ ಮರ್ಯಾದೆಗಳಿಂದ ಅಂತ್ಯ ಕ್ರಿಯೆಯನ್ನು ನಡೆಸಲು ಜಿಲ್ಲಾಡಳಿತವು ವ್ಯವಸ್ಥೆಯನ್ನು ಮಾಡುವುದು. ಜಿಲ್ಲಾಧಿಕಾರಿಗಳು ಚುನಾಯಿತ ಪ್ರತಿನಿಧಿಗಳಿಗೆ ಸಂದೇಶ ರವಾನಿಸಿ ಅಂತ್ಯ ಕ್ರಿಯೆಯಲ್ಲಿ ಪಾಲ್ಗೊಳ್ಳಲು ತಿಳಿಸಬಹುದು. ಯುದ್ಧ ಮರಣವಲ್ಲದ ಸಾಮಾನ್ಯ ಸಾವುಗಳಿಗೆ ಜಿಲ್ಲಾಧಿಕಾರಿಗಳು ತಮ್ಮ ಪ್ರತಿನಿಧಿಯನ್ನು ನಿಯೋಜಿಸಬಹುದು ಹಾಗೂ ಪೋಲೀಸ್ ಗೌರವದೊಂದಿಗೆ ಅಂತ್ಯ ಕ್ರಿಯೆ ನೆರವೇರಿಸಬೇಕು. ಸೈನಿಕ ಕಲ್ಯಾಣ ಇಲಾಖೆಯ ಪ್ರತಿನಿಧಿಗಳೂ ಅಂತ್ಯ ಕ್ರಿಯೆಯಲ್ಲಿ ಭಾಗವಹಿಸಬೇಕು. ಬೆಂಗಳೂರಿನಿಂದ ಸ್ವಗ್ರಾಮಕ್ಕೆ ಮೃತ ದೇಹವನ್ನು ಕೊಂಡೊಯ್ಯಲು ಸಬ್ ಏರಿಯಾ ಕಛೇರಿಯು ಅವಶ್ಯ ಸಹಕಾರ ನೀಡುವುದು.

ಪುಟ...3.

5. ಯೋಧರು ಆತ್ಮ ಹತ್ಯೆಯಿಂದ ಮೃತರಾದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮ

ಆತ್ಮಹತ್ಯೆ ಮಾಡಿಕೊಂಡ ಯೋಧರಿಗೆ ಮಿಲಿಟರಿ ಅಂತ್ಯಕ್ರಿಯೆ ನಡೆಸುವುದು ವಾಡಿಕೆಯಲ್ಲಿಲ್ಲ.

6. ಯುದ್ಧ:ಯುದ್ಧದಂತಹ ಕಾರ್ಯಾಚರಣೆಯಲ್ಲಿ ಹಾಗೂ ಇತರೇ ರೀತಿ ಮೃತಪಟ್ಟ ಅರೆಮಿಲಿಟರಿ ಯೋಧರಿಗೆ ಅಂತಿಮ ನಮನ ಸಲ್ಲಿಸುವ ಬಗ್ಗೆ ಕಾರ್ಯಸೂಚಿ

ಇಂತಹ ಪ್ರಸಂಗ ಘಟಿಸಿದಾಗ ಗಡಿ ಭದ್ರತಾ ಪಡೆಯ ಡಿಐಜಿ ಮತ್ತು ಅವರ ಕಾರ್ಯಾಲಯದ ಸಬ್‌ಸಿಡರಿ ಟ್ರೈನಿಂಗ್ ಸೆಂಟರ್ (ಎಸ್‌ಟಿಸಿ) ರವರ ಕಛೇರಿ ಅಥವಾ ಅರೆ ಮಿಲಿಟರಿ ಪಡೆಯ ಮುಖ್ಯ ಕಛೇರಿಗಳು ಈ ಮಾಹಿತಿಯನ್ನು ಪೊಲೀಸ್ ಮಹಾ ನಿರ್ದೇಶಕರಿಗೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಶಿಷ್ಟಾಚಾರ) ಇವರಿಗೆ ತಿಳಿಸಬೇಕು. ತದನಂತರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಶಿಷ್ಟಾಚಾರ) ರವರು ಆಯಾ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳು ಮತ್ತು ಜಿಲ್ಲಾಧಿಕಾರಿಗಳಿಗೆ ಈ ಮಾಹಿತಿಯನ್ನು ಒದಗಿಸಬೇಕು. ಪೊಲೀಸ್ ಮಹಾ ನಿರ್ದೇಶಕರು ಈ ಮಾಹಿತಿಯನ್ನು ಆಯಾ ಜಿಲ್ಲೆಯ ಪೊಲೀಸ್ ಅಧೀಕ್ಷಕರಿಗೆ ತಿಳಿಸುವುದು, ಜಿಲ್ಲೆಯ ಹಂತದಲ್ಲಿ ಜಿಲ್ಲಾಧಿಕಾರಿಗಳು ಕೂಡ ಈ ಮಾಹಿತಿಯನ್ನು ಆಯಾ. ಸಂಬಂಧಪಟ್ಟ ಉಪ ವಿಭಾಗೀಯ ದಂಡಾಧಿಕಾರಿ ಮತ್ತು ತಾಲ್ಲೂಕಿನ ತಹಶೀಲ್ದಾರರಿಗೆ ಹಾಗೂ. ಉಪ ಪೊಲೀಸ್ ಅಧೀಕ್ಷಕರಿಗೆ ತಿಳಿಸುವುದು.

ಪಾರ್ಥಿವ ಶರೀರವು ಬೆಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸುವ ಸಮಯದ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಶಿಷ್ಟಾಚಾರ) ರವರು ಬಿಎಸ್‌ಎಫ್ / ಸಂಬಂಧಪಟ್ಟ ಅರೆ ಮಿಲಿಟರಿ ಪಡೆಯವರಿಂದ ಮಾಹಿತಿಯನ್ನು ಪಡೆದುಕೊಂಡು ಈ ಬಗ್ಗೆ ಡಿಜಿ ಮತ್ತು ಐಜಿಪಿ (ಪೊಲೀಸ್) ಹಾಗೂ ಸಂಬಂಧಪಟ್ಟ ಜಿಲ್ಲೆಯ ಉಸ್ತುವಾರಿ ಸಚಿವರು ಬೆಂಗಳೂರಿನಲ್ಲಿ ಉಪಸ್ಥಿತರಿದ್ದರೆ ಅವರಿಗೆ ಈ ವಿಷಯವನ್ನು ತಿಳಿಸುವುದು. ಪಾರ್ಥಿವ ಶರೀರಕ್ಕೆ ಗೌರವವನ್ನು ಅರ್ಪಿಸಲು ರಾಜ್ಯದ ಪರವಾಗಿ ಜಿಲ್ಲೆಯ ಉಸ್ತುವಾರಿ ಸಚಿವರು (ಪೊಲೀಸ್) ಇಲಾಖೆಯ ಪ್ರತಿನಿಧಿ ಹಾಗೂ ಆಡಳಿತ ಮತ್ತು ಸುಧಾರಣೆ ಇಲಾಖೆಯ (ಶಿಷ್ಟಾಚಾರ) ಪ್ರತಿನಿಧಿಗಳು ವಿಮಾನ ನಿಲ್ದಾಣದಲ್ಲಿ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವನ್ನು ಅರ್ಪಿಸುವುದು.

ಬೆಂಗಳೂರನ್ನು ಹೊರತುಪಡಿಸಿ ಮೃತ ಯೋಧರು ಯಾವ ಜಿಲ್ಲೆ ಅಥವಾ ತಾಲ್ಲೂಕಿಗೆ ಸೇರಿರುತ್ತಾರೋ ಅಲ್ಲಿಗೆ ಮೃತ ದೇಹವನ್ನು ರವಾನಿಸಲು ಸಂಬಂಧಪಟ್ಟ ಅರೆ ಮಿಲಿಟರಿ ಘಟಕ ವಾಹನವನ್ನು ಒದಗಿಸುವುದು. ಸಂಬಂಧಪಟ್ಟ ಘಟಕಗಳು ಇಲ್ಲವಾದಲ್ಲಿ ಜಿಲ್ಲಾಧಿಕಾರಿಗಳು ವಾಹನ ವ್ಯವಸ್ಥೆ ಮಾಡಲು ಸೂಚಿಸಿದೆ. ಆಯಾಯ ತಾಲ್ಲೂಕಿನ ಗಡಿಯಿಂದ ಪಾರ್ಥಿವ ಶರೀರವನ್ನು ಅಂತ್ಯ ಕ್ರಿಯೆಯ ಸ್ಥಳಕ್ಕೆ ಸುವ್ಯವಸ್ಥಿತವಾಗಿ ತಲುಪುವಂತೆ ಆಯಾ ತಾಲ್ಲೂಕಿನ ತಹಶೀಲ್ದಾರ್ ಮತ್ತು ಉಪ ಪೊಲೀಸ್ ಅಧೀಕ್ಷಕರವರು ಕ್ರಮ ತೆಗೆದು ಕೊಳ್ಳುವುದು.

ಪುಟ...4

ಯುದ್ಧ/ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮಡಿದ ಅರೆ ಮಿಲಿಟರಿ ಪಡೆಯ ಯೋಧರಿಗೆ ಯೋಧನ ನಿಕಟ ಸಂಬಂಧಿಗಳು ಇಚ್ಛಿಸುವ ಸ್ಥಳದಲ್ಲಿ ಅಂತ್ಯಕ್ರಿಯೆಯನ್ನು ಸಂಬಂಧಿಸಿದ ಘಟಕದವರು ಸಕಲ ಸರ್ಕಾರಿ ಮರ್ಯಾದೆಯಿಂದ ನೆರವೇರಿಸಲು ಜಿಲ್ಲಾಡಳಿತ ಸೂಕ್ತ ರೀತಿಯಲ್ಲಿ ಸಹಕರಿಸುವುದು. ಈ ಅಂತ್ಯಕ್ರಿಯೆಯಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳು, ಪೊಲೀಸ್ ಅಧೀಕ್ಷಕರು, ಅಥವಾ ಅವರ ಪ್ರತಿನಿಧಿಗಳು ಹಾಜರಿದ್ದು ಅಂತ್ಯಕ್ರಿಯೆ ನೆರವೇರಿಸಲು ಕ್ರಮ ತೆಗೆದು ಕೊಳ್ಳಬೇಕೆಂದು ಸೂಚಿಸಿದೆ.

ಇತರ ಕಾರಣಗಳಿಂದ ಮೃತಪಟ್ಟಿರುವವರ ಅಂತ್ಯ ಕ್ರಿಯೆಯಲ್ಲಿಯೂ ಜಿಲ್ಲಾ ಆಡಳಿತವು ಇದೇ ರೀತಿ ಸ್ಪಂದಿಸಬೇಕೆಂದು ಹಾಗೂ ಈ ಸುತ್ತೋಲೆಯಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸೂಚಿಸಿದೆ.

(ಕೆ. ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ,
(ಪೊಲೀಸ್ ಸಹಾಯಕ ಸೇವೆಗಳು)

ಇವರಿಗೆ:

1) ಪ್ರಧಾನ ಕಾರ್ಯದರ್ಶಿಗಳು,ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2) ಕಾರ್ಯದರ್ಶಿಗಳು,ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು.
3) ಎಲ್ಲಾ ಜಿಲ್ಲಾಧಿಕಾರಿಗಳಿಗೆ / ಜಿಲ್ಲಾ ಪೊಲೀಸ್ ಅಧೀಕ್ಷಕರು / ಉಪ ಪೊಲೀಸ್ ಅಧೀಕ್ಷಕರು / ತಹಶೀಲ್ದಾರ್‌ಗಳಿಗೆ.
4) ರಾಜ್ಯ ಎಲ್ಲಾ ವಿಭಾಗಗಳ ವಿಭಾಗಾಧಿಕಾರಿಗಳು.
5) ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು.
6) ಎಲ್ಲಾ ಉಪ ನಿರ್ದೇಶಕರುಗಳು / ಜಂಟಿ ನಿರ್ದೇಶಕರುಗಳು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ನಿರ್ದೇಶನಾಲಯದ ಮೂಲಕ.
7) ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಶಿಷ್ಟಾಚಾರ)

<u>ಪ್ರತಿ ಮಾಹಿತಿಗಾಗಿ:</u>

1) ಮಾನ್ಯ ಉಪ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿ.
2) ಮಾನ್ಯ ಗೃಹ ಮಂತ್ರಿಯವರ ಆಪ್ತ ಕಾರ್ಯದರ್ಶಿ,
3) ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ
4) ಕಾರ್ಯದರ್ಶಿಯವರ ಆಪ್ತ ಸಹಾಯಕರು, ಒಳಾಡಳಿತ ಇಲಾಖೆ
5) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಒಳಾಡಳಿತ ಇಲಾಖೆ.